ಇರ್ನೆ, “ಇರಲಿ ತೊಗೋ, ಏನೂ ಸಂಕೋಚಪಟ್ಟುಕೊಳ್ಳಬೇಡ. ತಿನ್ನು. ನಾನು ಎರಡು ಬರ್ಗರ್‌ಗಳನ್ನು ತಂದಿರುವೆ”ಎಂದು ಪ್ರತಿಕ್ರಿಯಿಸಿದಳು.

ಬರ್ಗರ್‌ನ ಘಟನೆ ಈ ಹಂತಕ್ಕೆ ತಲುಪಬಹುದೆಂಬ ಕಲ್ಪನೆ ಇರ್ನೆಗೆ ವನಭೋಜನದ ಸಮಯದಲ್ಲಿ ಅಪ್ಪಿತಪ್ಪಿ ಕೂಡ ಬಂದಿರಲಿಲ್ಲ. ಅವಳು ಹಾಗೆ ಮಾಡಿದ್ದು ಖಂಡಿತ ನಿರುದ್ದೇಶಪೂರ್ವಕವಾಗಿತ್ತು. ಆದರೆ ಅದು ಶರ್ಮಿಳಾಗೆ ಪಾಪವಾಗಿ ಪರಿಣಮಿಸಿಬಿಟ್ಟಿತ್ತು. ‘ಅವಳ ತಂದೆತಾಯಿ ಆಕೆಯನ್ನು ಬೈಯ್ದರೆ ಏನು ಮಾಡುವುದು?’

ಇರ್ನೆ ಹಾಗೆ ಯೋಚಿಸುತ್ತಿರುವಾಗಲೇ ತಂದೆ ಮನೆಗೆ ಬಂದರು. ಆಕೆ ಅವರನ್ನು ಕೇಳಬೇಕೆನ್ನುವಷ್ಟರಲ್ಲಿ ಅವಳ ತಾಯಿಯೇ ನಡೆದುದನ್ನೆಲ್ಲ ಸವಿವರವಾಗಿ ಅವರಿಗೆ ತಿಳಿಸಿಬಿಟ್ಟಳು.

“ಅಪ್ಪಾ, ಹಿಂದೂಗಳು ಗೋಮಾಂಸ ತಿನ್ನುವುದಿಲ್ಲವೆಂದು ನನಗೆ ಗೊತ್ತಿರಲಿಲ್ಲ” ಇರ್ನೆ ಸಣ್ಣ ದನಿಯಲ್ಲಿ ಗುನುಗುನಿಸಿದಳು.

“ಇರಬಹುದು ಮಗಳೆ, ಆದರೆ ಅವಳಿಗೆ ಇದು ಗೊತ್ತಿರಲಿಲ್ಲವೇ? ಗೊತ್ತಿದ್ದೂ ಅದನ್ನೇಕೆ ತಿಂದಳು ಅವಳು?”

ಅಪ್ಪ ಕೇಳಿದ್ದು ಸರಿಯಾಗಿಯೇ ಇತ್ತು. ಗೊತ್ತಿದ್ದೂ ಶರ್ಮಿಳಾ ಯಾಕೆ ಆ ಬರ್ಗರನ್ನು ತಿಂದಳು?

“ಅದು ಗೋಮಾಂಸದ ಬರ್ಗರ್ ಎಂದು ನೀನು ಅವಳಿಗೆ ಹೇಳಿದ್ದೆಯಾ?”

ತಂದೆ ಹೀಗೆ ಪ್ರಶ್ನಿಸಿದಾಗ ಇರ್ನೆ ಕಣ್ಣೀರು ಸುರಿಸುತ್ತ ಗದ್ಗದಿತ ದನಿಯಲ್ಲಿ, “ಇಲ್ಲ ಅಪ್ಪ... ನಾನು ಅವಳಿಗೆ ಹಾಗೆ ಹೇಳಲಿಲ್ಲ. ಬರ್ಗರ್ ಎಂದು ಮಾತ್ರ ಹೇಳಿದೆ... ಅದು ನನ್ನ ತಪ್ಪು...”

“ನೋಡು ಮಗಳೆ, ತಪ್ಪು ಎರಡೂ ಕಡೆಯಿಂದ ಆಗಿದೆ. ಇರಲಿ ಬಿಡು. ಅದನ್ನೇ ನೀನು ಮನಸ್ಸಿಗೆ ಹಚ್ಚಿಕೊಳ್ಳಬೇಡ. ಮತ್ತೆ ನೀನು ಈಗ ಹೋಗಿ, ಅದು ಗೋಮಾಂಸದ ಬರ್ಗರ್ ಆಗಿತ್ತೆಂದು ಮಾತ್ರ ಹೇಳಬೇಡ.”

ತಂದೆಯ ಮಾತಿನಿಂದ ಇರ್ನೆಗೆ ಸಮಾಧಾನವಾಗಲಿಲ್ಲ.

“ಅಲ್ಲ ಅಪ್ಪಾ, ಅವಳ ತಂದೆಗೆ ಇದು ಗೊತ್ತಾದರೆ ಅವರು ಅವಳನ್ನು ಖಂಡಿತ ಬೈಯ್ಯುತ್ತಾರೆ.”

“ಅವರಿಗೆ ಗೊತ್ತಾಗುವುದಾದರೂ ಹೇಗೆ? ನೀನು ಹೇಳಿದರೆ ಮಾತ್ರ ತಾನೆ?”

“ಆಯ್ತು ಅಪ್ಪಾ ಅದೆಲ್ಲಾ ಇರಲಿ, ನೋಡು ಈಗ ಅವಳು ಗೋಮಾಂಸವನ್ನು ತಿಂದುಬಿಟ್ಟಿದ್ದಾಳೆ. ಅವಳಿಗೆ ಪಾಪ ತಟ್ಟುವುದಿಲ್ಲವೆ? ಹಾಗಾಗಿಬಿಟ್ಟರೆ ಅವಳು ಇನ್ನುಮುಂದೆ ನನ್ನೊಂದಿಗೆ ಮಾತಾಡೋದೇ ಇಲ್ಲ.”

ಇರ್ನೆಯ ಹೊಟ್ಟೆಯಲ್ಲಿ ಪಾತರಗಿತ್ತಿಗಳು ಹಾರಾಡುವಂತೆ ಭಾಸವಾಯ್ತು. ‘ತಾವು ವನಭೋಜನಕ್ಕೆ ಹೋಗಿದ್ದ ಆ ದಿನ ಅದೆಷ್ಟು ಖುಷಿಯದಾಗಿತ್ತು!! ಆದರೆ ತನ್ನಿಂದಾದ ಒಂದು ಸಣ್ಣ ತಪ್ಪಿನಿಂದಾಗಿ ಶರ್ಮಿಳಾ ಈಗ ಅದರ ಕೆಟ್ಟ ಪ್ರತಿಫಲವನ್ನು ಅನುಭವಿಸಬೇಕಾಯ್ತು’ ಎಂದು ಅವಳು ಹಳಹಳಿಸತೊಡಗಿದಳು.

ಇರ್ನೆ ತುಂಬ ಕನಸುಣಿ ಹುಡುಗಿ. ಆದರೆ ಅವಳಿಗೆ ಇಂದು ಬಿದ್ದ ಕನಸು ಮಾತ್ರ ಎಂದಿಗಿಂತ ಭಯಾನಕವಾಗಿತ್ತು. ಕನಸಿನಲ್ಲಿ ಶರ್ಮಿಳಾಳ ತಂದೆತಾಯಿ ಇಬ್ಬರೂ ಸೇರಿ ಅವಳಿಗೆ ಸರಿಯಾಗಿ ನೀರಿಳಿಸುತ್ತಿದ್ದರು. ಹೊರಗಡೆ ಭಯಂಕರವಾದ ಸಿಡಿಲುಮಿಂಚುಗಳೊಂದಿಗೆ ಮಳೆ ಸುರಿಯುತ್ತಿತ್ತು. ಶರ್ಮಿಳಾ, ತನ್ನ ತಂದೆತಾಯಿಗಳೆದುರು ಮಂಡಿಯೂರಿ ಕುಳಿತು ಅಳುತ್ತಿದ್ದಳು.